ಅಷ್ಟು ಮಳಿ... ಧೋ ಅನ್ನೂ ಮಳಿ. ನನ್ನ ಗಲ್ಲದ ಮ್ಯಾಲಿನ ಕಣ್ಣೀರು ಗದ್ದದಿಂದ ಕೆಳಗಿಳಿದು ಭೂಮಿಗೆ ಉದುರಬೇಕಿತ್ತು. ಆಗ ಅಂಥಾ ಕ್ಷಣದೊಳಗ ಕಿಸಕ್ಕನೆ ನಗಿ ಬಂದಿತ್ತು. ಮಳಿಯೊಳಗ ಅಳೂದು ಗೊತ್ತಾಗೂದಿಲ್ಲ... ಅದಕ್ಕೇ ನಾ ನೆನಸ್ಕೊಂತ, ನೆನಕೊಂತ ಅಳ್ತೀನಿ ಅನ್ನೂ ಚಾಪ್ಲಿನ್ ಮಾತು ನೆನಪಾಗಿತ್ತು. ಅದರ ಜೊತಿಗೆ ಆ ಜೋಕುನೂ... ಹಿಡಿದು ಹೊಡೀರಿ ಇಂಥೋರಿಗೆ... ಸ್ವಿಮಿಂಗ್‌ಪೂಲ್‌ನಾಗ ಸುಸು ಮಾಡೋರು ಇವರೇ... ಇಂಥವರೇ... ಅಂತ ಬರದಿತ್ತು...

ಜೀವನಾ ಹಿಂಗೇ... ಅಳು ಅಳ್ಕೊಂತ ನಗೂದು... ನಕ್ಕೊಂತ ಮತ್ತ ನೆನಪಿನ ನದಿಯೊಳಗ ಹರದುಹೋಗುದು. ನಂಗಂತೂ ಮಳಿ ಅಂದ್ರ ಒಂಥರಾ ಮಿಶ್ರಭಾವ. ಹಳೀಮಳಿ ನೆನಪಾಗಿ ಖುಷಿ ಆದ್ರ ಈ ಹೊಸಾ ಮಳಿ ಅದ್ಯಾಕೋ ಕಣ್ಣೀರು ಹರಸಿಯೇ ಸುಮ್ನಾಗ್ತದ.

ಮಳಿ ನಿಲ್ಲೂತನಾನೂ ನಾ ಎಲ್ಲೋ ಕಳೆದುಹೋದ ಅನುಭವ. ನನ್ನೊಳಗ ಏನು ನಡದದ ಅನ್ನೂದು ನನಗೇ ತಿಳೀದ ಸಮಯ ಅದು. ನಾನು ನಾನಾಗಿರದೇ ಇರುವ ಸಮಯ ಅದು. ಇದ್ದಕ್ಕಿದ್ದಂಗ ಬೀದರ್ ಮನಿಗೆ ಓಡಿ ಹೋಗಿರ್ತದ ಮನಸು. ದೊಡ್ಡ ಮನಿ ನಮ್ದು. ಪನ್ನೊಳಗಿಯಿಂದ ನೀರು ಧಬಧಬ ಸುರೀತಿದ್ರ ಅಪ್ಪ ಅಮ್ಮಾಗ ಆ ನೀರು ತುಂಬಿಡೂದೇ ಕೆಲಸ... ಬಕೀಟು, ಕೊಡ ಸರಸಾಕ ನಿಲ್ಲೂ ಸಡಗರ ನಂದು. ಆದ್ರ ಹಂಗ ಮಾಡೂ ನೆವದಾಗ ನೆನೀಬೇಕು ಅನ್ನೂ ಆಸಿ, ನನ್ನಮ್ಮನ ದೊಡ್ಡ ಕಣ್ಣು, ನನ್ನಪ್ಪನ ಗದರಿಕೆಯೊಳಗ ಎಲ್ಲೋ ಮರಿಯಾಗ್ತಿತ್ತು. ಕೈ ನೆನಸಿಕೊಂಡಷ್ಟೇ ಖುಷಿ.

ಹದಿನಾರು ಕಮಾನಿನ ಮನಿ. ಪ್ರತಿ ಕಮಾನಿಗೂ ಒಂದೊಂದು ಕಡೆ ನೀರು ಸುರಿಯುವ ವ್ಯವಸ್ಥೆ. ಒಮ್ಮೆ ಎಲ್ಲಾ ನೀರು ತುಂಬಿದ್ರೂ ನೀರು ಪಡಸಾಲೀಗೆ ಸಿಡೀದೇ ಇರಲಿ ಅಂತ ಬಕೀಟು ಇಡೋರು. ಅಪ್ಪನ ಆರಾಮ ಕುರ್ಚಿಯೊಳಗ ಕುಂತು ಆ ಬಕೀಟು ತುಂಬುವಾಗಿನ ಸಪ್ಪಳ ಕೇಳೂದೇ ಒಂಥರಾ ಮಜಾ ಕೊಡ್ತಿತ್ತು.

ಮನೀಮ್ಯಾಲೆ ಮಳಿಯ ರಿಮ್‌ಝಿಮ್ ರಿಮ್‌ಝಿಮ್ ಸಪ್ಪಳ, ನೀರು ಮೊದಲು ಬಕೀಟಿಗೆ ಸೋಕಿದಾಗ ಬರುವ.... ಟಣಣಣಣಣಣ ಸಪ್ಪಳ... ಆಮೇಲೆ ಬಕೀಟು ತುಂಬಿದ ಮ್ಯಾಲೆ ಆ ಸಪ್ಪಳ ಎಲ್ಲಿ ಮಾಯ ಆತು... ಮಳಿ ನಿಂತ ಮೇಲೆ ಒಂದೊಂದೇ ಹನಿ ಬೀಳುಮುಂದ ಟಿಪ್ ಟಿಪ್... ಆ ಸಪ್ಪಳ... ಎಲ್ಲಾ ಕೇಳೂಮುಂದ ಎಲ್ಲೋ ಕಳದುಹೋದಂಗ. ಗಲ್ಲದ ಮ್ಯಾಲೆ ಅಂಗೈ ಇಟ್ಟು, ತಣ್ಣಗ ಕೊರಿಯುವ ಕಿವಿ ಬಿಸಿ ಅಂಗೈಯೊಳಗ ಮುಚ್ಕೊಂಡ್ರೂ ಆ ಮಳಿಯ ಟಿನ್‌ಟಿನ್‌ಟಿಡಿನ್... ಸಪ್ಪಳ ಮಾತ್ರ ಮಾಯ ಆಗ್ತಿರಲೇ ಇಲ್ಲ.

ಆ ಆರಾಮ ಕುರ್ಚಿಯಿಂದ ಎಬ್ಬಿಸೂ ಶಕ್ತಿ ಯಾರಿಗೂ ಇರಲಿಲ್ಲ. ಅಮ್ಮ ಚುರುಮುರಿಗೆ ಒಗ್ಗರಣಿ ಹಾಕಿದಾಗ... ಕರಿಬೇವು ಸಿಡಿದಾಗಲೂ ಏನೂ ಅನಸ್ತಿರಲಿಲ್ಲ. ಆದ್ರ ಬಳ್ಳೊಳ್ಳಿ ಜಜ್ಜಿ ವಗದಾಗ... ಮೂಗಿನ ಹೊರಳಿಗಳು ಅವತ್ತಿನ ಮಳಿಗೆ ಅರಳದಿ ಹೂವಿನ್ಹಂಗೆ ಥೇಟ್ ಹಂಗೇ ಅರಳ್ತಿದ್ವು. ಮನಸು ಅಡಗಿ ಮನೀಗೆ ಓಡಿದ್ರ, ಕಾಲು ಅಣ್ಣನ ರೂಮಿಗೆ ಓಡ್ತಿದ್ವು. ಅಲ್ಲಿಂದ ಹಾಳಿ ತೊಗೊಂಡು ಬರಬೇಕಲ್ಲ... ಚುರಮುರಿ ತುಂಬಸ್ಕೊಳ್ಳಾಕ...

ನಮ್ಮಣ್ಣ ಭಾರಿ ಹದಗಾರ. ಬಳ್ಳೊಳ್ಳಿ ವಾಸನಿ ಅವನ ಹಸಿವೂ ಕೆರಳಸ್ತಿತ್ತು. ಅಷ್ಟೇ ಅಲ್ಲ ಅವನ ರುಚಿಮೊಗ್ಗು ಅರಳಸ್ತಿತ್ತು. ಅಂವಾ ಹಾಳೀ ಚಿಂತಿ ಹಾಳಾಗಿ ಹೋಗ್ಲಿ... ಅಂತ ಕಣ್ಣೀರು ಸುರಸ್ತಿದ್ದ. ಯಾಕ ಗೊತ್ತಾ? ಉಳ್ಳಾಗಡ್ಡಿ ಹೆಚ್ಚಾಕ... ಸಣ್ಣಗೆ ಒಂದೇ ಅಳತಿ ಉಳ್ಳಾಗಡ್ಡಿ ಹೆಚ್ತಿದ್ದ. ಅದಕ್ಕ ಒಂದಷ್ಟು ಕೊತ್ತಂಬರಿ ಹೆಚ್ಚಿ, ಲಿಂಬೆಹಣ್ಣೂ ಹೆಚ್ಚಿ ಇಡ್ತಿದ್ದ. ಅಮ್ಮ ದೊಡ್ಡ ಬೊಗೋಣಿಯೊಳಗ ಚುರಮುರಿ ಕಲಸೂದ್ರೊಳಗ ಇಷ್ಟು ರೆಡಿ ಇರ್ತಿತ್ತು.